

## ಬಸವನ ಹುಳು

‘ಬಸವನಹುಳು’ ಮೃದ್ವಂಗಿ ಜಾತಿಗೆ ಸೇರಿದ (ಭೂಮಿಯ ಮೇಲೆ) ರೈತನ ಹೊಲದಲ್ಲಿ ಕಂಡುಬರುವ ಜೀವಿ. ನಂದಿಯನ್ನು ಹೋಲುವುದರಿಂದ ಗ್ರಾಮ್ಯ ಭಾಷೆಯಲ್ಲೂ ಇದನ್ನು ಬಸವನಹುಳವೆಂದೇ ಕರೆಯಲಾಗುತ್ತದೆ. ಇದರ ದೇಹವು ವೃತ್ತಾಕಾರದ ಗಟ್ಟಿ ಚಿಪ್ಪಿನಿಂದ ಕೂಡಿದ್ದು ತಾಪದಿಂದ ಹಾಗೂ ತನ್ನ ಜೀವಕ್ಕೆ ಕೀಟಗಳಿಂದ, ಸರೀಸೃಪಗಳಿಂದ ಅಪಾಯ ಎದುರಾದಾಗ ದೇಹವನ್ನು ಚಿಪ್ಪಿನೊಳಗೆ ಎಳೆದುಕೊಂಡು ಚಲನೆಯಿಂದ ನಿಶ್ಚಲ ಸ್ಥಿತಿಗೆ ತಲುಪಿ ಅವುಗಳ ಗಮನಕ್ಕೆ ಬಾರದಂತೆ ರಕ್ಷಿಸಿಕೊಳ್ಳುವ ಜಾಣ್ಮೆ ತೋರುತ್ತೆ.

ಸಾಗುವಾಗ ಹುಲ್ಲುಹಾಸು, ಕಲ್ಲಿನ ಮೇಲೆ ಸಿಂಬಳದಂತಹ ದ್ರವವನ್ನು ಬಿಡುತ್ತಾ ಸಾಗುವ ಇದು ಆಹಾರವಾಗಿ ಸಸ್ಯಗಳ ಎಲೆಗಳನ್ನು, ಹುಲ್ಲನ್ನು ಸೇವಿಸುತ್ತದೆ.

–ಮೈಲಾರಪ್ಪ ಬೂದಿಹಾಳ ಮುಗಿಲ ಹಕ್ಕಿ, ಗದಗ

## ವಾಣಿ ವಿಲಾಸ ಸಾಗರ ವೈಭವ

ಭಾರತದ ನಕ್ಷೆಯ ರೂಪದಂತೆಯೇ ಈ ಚಿತ್ರದಲ್ಲಿ ಕಾಣುತ್ತಿರುವುದು ರಾಜ್ಯದ ವಾಣಿವಿಲಾಸ ಸಾಗರ ಅಥವಾ ಮಾರಿಕಣಿವೆ ಜಲಾಶಯ. ಡಾ. ಸರ್. ಎಂ. ವಿಶ್ವೇಶ್ವರಯ್ಯ ಅವರು ಕಟ್ಟಿಸಿದ ಮೊದಲ ಅಣೆಕಟ್ಟು ಇದೂ ಎನ್ನುತ್ತಾರೆ. ಚಿತ್ರದುರ್ಗದ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಎಂಬ ಹಳ್ಳಿಯಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ಈ ಅಣೆಕಟ್ಟನ್ನು ಕಟ್ಟಲಾಗಿದೆ. ಶತಕದ ಸಂಭ್ರಮ ಕಂಡಿರುವ ಈ ಜಲಾಶಯದ ನಿರ್ಮಾಣಕ್ಕೆ ಮೈಸೂರಿನ ಒಡೆಯರು ಅವಿರತವಾಗಿ ಶ್ರಮಿಸಿ ಆರ್ಥಿಕ ಸಹಾಯವನ್ನೂ ಮಾಡಿದ್ದಾರೆ. ಹಣದ ಮುಗ್ಗಟ್ಟು ಎದುರಾದಾಗ ಮಹಾರಾಣಿ ತಮ್ಮ ಚಿನ್ನದ ಒಡವೆಗಳನ್ನು ಮಾರಿ ಜಲಾಶಯವನ್ನು ಪೂರ್ಣಗೊಳಿಸಿದ್ದಾರೆ ಎನ್ನಲಾಗಿದೆ.

–ಶಶಿರೇಖಾ ನಾಗೇಂದ್ರ, ತುಮಕೂರು

